ನರೇಂದ್ರ ಪೈ

# ಮತ್ತೆ ಸಿಕ್ಕಿದ ಎಸ್. ಮಂಜುನಾಥ್...

ಕವಿ ಜೀವಯಾನದ ಎಸ್. ಮಂಜುನಾಥ್ ಕಣ್ಮರೆಯಾಗಿ ಆಗಲೇ ಮೂರು ವರ್ಷಗಳು. ಈಗ ಅವರ ಕವಿತೆಗಳು, ರಿಲ್ಕೆಯ ಸುಮಾರು ಇಪ್ಪತ್ತೇಳು ಕವಿತೆಗಳ ಅನುವಾದದೊಂದಿಗೆ ಕಾವ್ಯಾಸಕ್ತರಿಗೆ ಸಿಗುವಂತಾಗಿರುವುದು ನಿಜಕ್ಕೂ ಸಂಭ್ರಮಿಸಬೇಕಾದ ಸಂಗತಿ.

ಈ ಕವಿತೆಗಳು ಮತ್ತೊಮ್ಮೆ ಎಸ್. ಮಂಜುನಾಥ್ ಅವರೊಂದಿಗೆ ಮಾತನಾಡುವ ಅವಕಾಶವನ್ನು ತೆರೆಯುವಂತಿವೆ. ಅವರ ಕವಿತೆಗಳೇ ಹಾಗೆ. ಮುಕ್ತವಾಗಿ ಮಾತಿಗಿಳಿದು, ಮನುಷ್ಯ ಸಂಬಂಧಕ್ಕೊಂದು ಹೆಸರಿನ ಲೇಬಲ್ಲು, ಕಾಲಮಾನದ ಇತಿಹಾಸ ಎರಡೂ ಅಗತ್ಯವಿಲ್ಲವೆಂಬಂತೆ ಆಪ್ತರಾಗುತ್ತಿದ್ದ ಅವರ ಅದೇ ಗುಣ ಅವರ ಕವಿತೆಗಳದ್ದೂ. ಅವು ಎಂಥ ಅಧ್ಯಾತ್ಮದ ಅಥವಾ ಜೀವಯಾನದ ಗಾಢ, ಗೂಢ, ನಿಬಿಡ ಅರ್ಥಪರಂಪರೆಯನ್ನೇ ಹಾಡುತ್ತಿದ್ದರೂ ಸರಳವಾಗಿ ಆರಿದ ಗಂಟಲಲ್ಲಿ ನೀರಿಳಿದಂತೆ ನಮ್ಮದಾಗಿ ಬಿಡುತ್ತವೆ. ಹರಿವ ನದಿಯ ಜುಳುಜುಳು ನಾದದಂತೆ ಅವರ ಕವಿತೆಗಳ ಸದ್ದು. ಅಲ್ಲಿ ಅಬ್ಬರವಿಲ್ಲ, ಮೇಲ್ನೋಟಕ್ಕೆ ಯಾವುದೇ ಏರಿಳಿತದ ಪ್ರವಾಹವಿಲ್ಲ. ಸುಮ್ಮನೇ ಕುಳಿತು ಆ ನಾದವನ್ನು ನಮ್ಮೆದೆಗೆ ಬಿಟ್ಟುಕೊಳ್ಳುವಾ ಅನಿಸಬೇಕು, ಅಂಥ ಮಂದ್ರಸ್ಥಾಯಿಯ ಲಯ ಅದು. ಕೆಲವೊಮ್ಮೆ ಆ ನದಿ ಗುಪ್ತಗಾಮಿನಿಯ ಅಮೂರ್ತ ಚಲನೆಯನ್ನೂ ಮೈಗೂಡಿಸಿಕೊಂಡು ಅನೂಹ್ಯವಾಗುವುದೂ ಇದೆ. ಸುಮ್ಮನಿರುವ ಸುಮ್ಮಾನವನ್ನು ಬಲ್ಲ ಅವರ ಕವಿತೆಯ ಭಾಷೆ, ಮಾತಿನ ಸಲಿಲ ಧಾಟಿಯಲ್ಲಿದ್ದೂ ತನ್ನ ತೆಕ್ಕೆಗೆ ಸೆಳೆದುಕೊಳ್ಳುವ ಬದುಕಿನ ಸತ್ಯಗಳು ಮೌನದ ಮಣಿಗಳಂತೆಯೇ ಅಚ್ಚರಿ ಹುಟ್ಟಿಸುತ್ತವೆ. ಹಾಗೆ ಅವರ ಕವಿತೆಗಳಲ್ಲಿ ಕಂಡೂ ಕಾಣದಂತೆ ಅಧ್ಯಾತ್ಮ, ಭಕ್ತಿ, ಪರಿಸರದ ಪಾಠ ಮತ್ತು ಮೌನ ಕರುಣಿಸಿದ ದರ್ಶನ.

ಮಂಜುನಾಥ್ ಕವಿತೆಗಳ ಸ್ಥಾಯೀ ಪ್ರತಿಮೆಗಳಂತೆ ಕಂಡುಬರುವ ಅನೇಕ ಅಂಶಗಳಲ್ಲಿ ಬಾಹುಬಲಿ ಬಹುಮುಖ್ಯ. ಮಂಜುನಾಥ್ ಈ ಬಾಹುಬಲಿಯನ್ನು ಶ್ರವಣಬೆಳಗೊಳದ ಮೂರ್ತಿಯಾಗಿಯೇ ಮನದುಂಬಿಕೊಳ್ಳುವಾಗಲೂ ಅಲ್ಲಿನ ಕೃಷಿಭೂಮಿಯೇ ಶಿಲೆಯಾಗಿ ಎದ್ದು ನಿಂತಿತೋ ಎಂಬಂತೆ ಬರೆಯುತ್ತಾರೆ. ಇದು ಭೌತಿಕವಾಗಿ ಅಲ್ಲ, ಸಾಂಸ್ಕೃತಿಕವಾಗಿ, ಮನೋಧರ್ಮವಾಗಿ ಮತ್ತು ಜನಮನದ ಪ್ರತಿಮೆಯಾಗಿ ಎನ್ನುವುದು ಬಹುಮುಖ್ಯ ಅಂಶ.

ಹಾಗೆ ಅವರ ಎಲ್ಲಾ ಕವಿತೆಗಳ ಸ್ಥಾಯೀ ರೂಪಕವಾಗಿ ಕಂಡು ಬರುವ ಇನ್ನೊಂದು ಅಂಶವೂ 'ನೆಲದ ಬೇರು ನಭದ ಬಿಳಲಾ'ಗುವ ಚೋದ್ಯವೇ. ಹಾಗೆ ಅವರಿಗೆ ನೆಲದ, ಹಸಿ ಮಣ್ಣಿನ, ಮೊಳಕೆಗೆ ಕಾದಿರುವ ಪುಟ್ಟ ಬೀಜದ, ಹುಲ್ಲು ಗರಿಕೆಯ, ಬೂರುಗದ ಬೀಜ ಬಿಟ್ಟ ಬೆಳ್ಳನೆಯ ಹತ್ತಿಯಂಥ ಹೂವಿನ, ನಂದಬಟ್ಟಲಿನ, ನೆಲಮಟ್ಟದಲ್ಲೇ ಹಾರುವ ಪುಟ್ಟ ಚಿಟ್ಟೆಯ, ಕಡಲಿನ ಅಲೆಯ ನಂಟು ಹೇಗೋ ಹಾಗೆಯೇ ನಭದ, ನಕ್ಷತ್ರದೇವತೆಯ, ಹಾರುವ ಹಕ್ಕಿಪಲ್ಟಿಯ ನಂಟೂ. ನಡುವೆ ಅವರ ಬೊಗಸೆ ಜಲ ಒಂದು ಬೀಜಕ್ಕಾಗಿ.